
ಬೇಕೋ ಆವಾಗ ನಿಸರ್ಗದಿಂದ ತಮ್ಮ ಅವಶ್ಯಕತೆಗಳನ್ನು ಹೆಕ್ಕುವ ಜನರಿಗೆ ನಾಳೆಯ ಚಿಂತೆ ಮತ್ತು ಅದಕ್ಕೆ ಬೇಕಾದ ಸಂಗ್ರಹದ ಪ್ರಕ್ರಿಯೆಯನ್ನು ವಿವರಿಸುವುದು ಕಷ್ಟವೆಂದು ಹೇಳಿದ್ದರು.

ಸ್ವಯಂಪೂರ್ಣವಾಗಿ ತಮ್ಮಲ್ಲೇ ತೃಪ್ತಿ ಪಡೆದ ಜನರಿಗೆ ಸರ್ಕಾರದ ಅವಶ್ಯಕತೆಯೂ ಇಲ್ಲ. ಹೀಗಾಗಿಯೇ, ಓಟು ಕೇಳಲು ಬಂದ ರಾಜಕೀಯ ಪ್ರತಿನಿಧಿಗಳನ್ನು, 'ಇವತ್ತು ನಾವು ಉಣ್ಣುವುದಕ್ಕೆ ಏನು ತಂದಿದ್ದೀರಿ?' ಎನ್ನುವ ಸರಳ ಪ್ರಶ್ನೆಯನ್ನು ಕೇಳುತ್ತಾರೆ. 'ನಿಮಗಾಗಿ ನಾವು ಹೋರಾಡಿ ಸ್ವಾತಂತ್ರ್ಯವನ್ನು ಪಡೆದೆವು' ಎನ್ನುವ ಮಾತು ಅವರಿಗೆ ಅರ್ಥವೇ ಆಗುವುದಿಲ್ಲ. ಸರ್ಕಾರದಿಂದ ಏನೂ ಬಯಸದ ತೃಪ್ತರಿಗೆ ಅಲ್ಲಿ ಯಾರಿದ್ದರೇನು?

ಖಾಸಗಿ ಆಸ್ತಿ ಮತ್ತು ಸಂಗ್ರಹವೇ ಅಸಮಾನತೆಗೆ ಕಾರಣವೆನ್ನುವ ಮಾರ್ಕ್ಸ್‌ವಾದದ ಮಾತನ್ನು ಈ ಜನಜಾತಿಯವರು ಒಪ್ಪಬೇಕೆಂದೇನೂ ಇಲ್ಲ. ಅವರಲ್ಲಿ ಖಾಸಗಿ ಆಸ್ತಿಯಿದೆ. ಆದರೆ, ವಿನಾಕಾರಣ ಖಾಸಗಿ ಆಸ್ತಿಯ ಸಂಗ್ರಹವಿಲ್ಲವಾದ್ದರಿಂದ ಆ ಸಮಾಜ ಹೆಚ್ಚು ಸಮತಾಭಾವದಿಂದ ಕೂಡಿರುತ್ತದೆಂದು ಸುಜ್‌ಮನ್ ಹೇಳುತ್ತಾರೆ.




ಇದೇ ಬುಡಕಟ್ಟು ಜನಾಂಗದವರ ಬಗ್ಗೆ ಮಾಡಿದ ಚಲನ ಚಿತ್ರ **'The Gods Must be Crazy'**. ಆ ಚಿತ್ರದ ಉಲ್ಲೇಖವನ್ನೂ ಸುಜ್‌ಮನ್ ಮಾಡುತ್ತಾರೆ. ಆ ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ ನಾಯಕನಿಗೆ ಸಾಕಷ್ಟು (ಆದರೆ, ಚಲನಚಿತ್ರ ನಟರಿಗೆ ಕೊಡುವುದಕ್ಕಿಂತ ಕಮ್ಮಿ) ದುಡ್ಡು ಕೊಡಲಾಯಿತು. ಅದರಿಂದ ಆತ ಒಂದು ಮನೆ ಕಟ್ಟಿಕೊಂಡ. ಕಟ್ಟಿಕೊಂಡರೂ, ಆ ಮನೆಯನ್ನು ಬೇಡದ ಸಾಮಾನುಗಳ ಉಗ್ರಾಣವಾಗಿ ಉಪಯೋಗಿಸಿ, ಅವನು ಬಯಲಿನಲ್ಲಿಯೇ ಮಲಗುತ್ತಿದ್ದನಂತೆ!

ಆಧುನಿಕತೆಯು ಬುಡಕಟ್ಟು ಜನಜಾತಿಯವರನ್ನು ತಟ್ಟುತ್ತಿದೆಯೆನ್ನುವುದೇನೋ ನಿಜ. ಕೆಲಸ, ದುಡ್ಡು, ಖಾಸಗಿ ಆಸ್ತಿ, ಎಲ್ಲವೂ ಅವರನ್ನು ತಟ್ಟದೇ ಇರುವುದಿಲ್ಲ. ಆದರೆ, ಹಾಗೆ ಬಂದ ಆಧುನಿಕತೆಯನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವುದು ಆಸಕ್ತಿಯ ವಿಷಯ. ಆಸ್ತಿ, ವಸ್ತು, ದುಡ್ಡಿನ ಸಂಗ್ರಹದ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೆ, ಹಂಚಿಕೊಳ್ಳುವ ಮನಸ್ಸಿದ್ದರೆ, ಭವಿಷ್ಯಕ್ಕಾಗಿ ಈ ದಿನವೇ ದುಡಿದು ಉಳಿತಾಯ ಮಾಡಬೇಕೆನ್ನುವ ತುರ್ತು ಇರುವುದಿಲ್ಲ. ಆಧುನಿಕ ನೌಕರಶಾಹಿಯ ನಿರ್ಮಿತಿಗಳಾದ ಪಿಂಚಣಿ, ಸಾಮಾಜಿಕ ಭದ್ರತೆ, ವಿಮೆ, ಗ್ರಾಚ್ಯುಯಿಟಿಗಳಿಲ್ಲ. ಹಾಗಿಲ್ಲದಾಗ ಬ್ಯಾಂಕೂ ಇಲ್ಲ, ಎಲ್‌ಐಸಿಯೂ ಇಲ್ಲ. ನಮ್ಮ ಸಮಾಜ ನಮ್ಮನ್ನು ನೋಡಿಕೊಳ್ಳುವ ಸಾಮಾಜಿಕ ಕರಾರು ಮಾಡಿಕೊಂಡವರಿಗೆ ವಿಮೆಯ ಅವಶ್ಯಕತೆಯೇನು?

ಮುಂದೆ ದುಡಿಯಲಾಗದ ದಿನಕ್ಕಾಗಿ ಇಂದೇ ದುಡಿದು ಸಂಗ್ರಹಿಸಿಟ್ಟುಕೊಳ್ಳುವ ತುರ್ತು ಇಲ್ಲದಿದ್ದರೆ, ಕೀನ್ಸ್ ಹೇಳಿದಂತೆ ನಾವೆಲ್ಲರೂ ವಾರಕ್ಕೆ 15 ಗಂಟೆಗಳ ಕೆಲಸ ಮಾಡಿ, ಮಿಕ್ಕ ಸಮಯದಲ್ಲಿ ಸಾಹಿತ್ಯ–ಸಂಗೀತ ಮತ್ತು ವಿರಾಮದ ಬಗ್ಗೆ ಯೋಚಿಸಬಹುದು. ಆದರೆ, ತೃಪ್ತಿಗೆ ಬೇಕಿರುವುದು ನಂಬಿಕೆ. ನಮ್ಮ ಸಮಾಜ ನಮ್ಮನ್ನು ಕೈಬಿಡುವುದಿಲ್ಲ ಎನ್ನುವ ನಂಬಿಕೆ. ಅದು ಇಲ್ಲದಿದ್ದರೆ ನಮ್ಮ ಭವಿಷ್ಯವನ್ನು ನಾವೇ ನೋಡಿಕೊಳ್ಳಬೇಕಿದ್ದರೆ ಅತಿ ದುಡಿಮೆ, ಉಳಿತಾಯ, ಆಸ್ತಿ, ಸಂಗ್ರಹಗಳೆಲ್ಲವೂ ನಮ್ಮ ಗ್ರಹಗತಿಯಲ್ಲಿ ಅಡಕವಾಗಿರುತ್ತವೆ. ಬೀಗವಿಲ್ಲದ ಬಾಗಿಲುಗಳು, ಬಾಗಿಲುಗಳಿಲ್ಲದ ಮನೆಗಳು ನಮ್ಮಲ್ಲಿದ್ದಾಗ ತೃಪ್ತಿಯೂ ಸುಖವೂ, ಸೌಖ್ಯವೂ, ಸಂತೋಷವೂ, ನಮ್ಮದಾಗುತ್ತವೆಯೇನೋ? ●